ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟೆ

UNIVERSITY OF HORTICULTURAL SCIENCES, BAGALKOTE

ದಿನಾಂಕ 21-11-2019 ರಂದು ಮಧ್ಯಾಹ್ನ 3.00 ಗಂಟೆಗೆ ವ್ಯವಸ್ಥಾಪನಾ ಮಂಡಳಿ ಸಭಾಂಗಣ, ತೋವಿವಿ, ಬಾಗಲಕೋಟೆ ಇಲ್ಲಿ ಜರುಗಿದ ವ್ಯವಸ್ಥಾಪನಾ ಮಂಡಳಿಯ 53ನೇ (ತುರ್ತು) ಸಭೆಯ ನಡುವಳಿಗಳು.

**MINUTES OF 53RD (EMERGENT) MEETING OF THE BOARD OF MANAGEMENT HELD ON 21-11-2019 AT 3.00 P.M. IN BOARD ROOM, UHS, BAGALKOTE.**

ಹಾಜರಿದ್ದ ಸದಸ್ಯರು

**Members present**

| | | | |
|---|---|---|---|
| 1. | ಡಾ. ಕೆ. ಎಂ. ಇಂದಿರೇಶ<br>ಕುಲಪತಿಗಳು ಹಾಗೂ ಅಧ್ಯಕ್ಷರು, ವ್ಯವಸ್ಥಾಪನಾ ಮಂಡಳಿ,<br>ತೋವಿವಿ, ಬಾಗಲಕೋಟೆ. | : | ಅಧ್ಯಕ್ಷರು |
| | **Dr. K. M. Indiresh**<br>Vice-Chancellor and Chairman<br>Board of Management, UHS, Bagalkote. | : | Chairman |
| 2. | ಶ್ರೀ ಆರ್. ಚೌಡರೆಡ್ಡಿ ತೂಪಲ್ಲಿ<br>ವಿಧಾನ ಪರಿಷತ್ ಸದಸ್ಯರು ಹಾಗೂ ಸದಸ್ಯರು<br>ವ್ಯವಸ್ಥಾಪನಾ ಮಂಡಳಿ, ತೋವಿವಿ, ಬಾಗಲಕೋಟೆ<br>ತೂಪಲ್ಲಿ ಗ್ರಾಮ, ಜೆ. ತಿಮ್ಮಸಂದ್ರ ಪೋಸ್ಟ್,<br>ಶ್ರೀನಿವಾಸಪುರ ತಾಲ್ಲೂಕು, ಕೋಲಾರ ಜಿಲ್ಲೆ. | : | ಸದಸ್ಯರು |
| | **Sri R. Chowda Reddy Thoopalli**<br>Member of Legislative Council and Member<br>Board of Management, UHS, Bagalkote<br>Tupalli Village, J. Timmasandra Post<br>Srinivaspur Taluka, Kolar District. | : | Member |
| 3. | ಶ್ರೀಮತಿ ಪದ್ಮಾವತಿ<br>ಸರ್ಕಾರದ ವಿಶೇಷ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ,<br>ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಇವರ ಪ್ರತಿನಿಧಿಗಳು ಮತ್ತು<br>ಸದಸ್ಯರು, ವ್ಯವಸ್ಥಾಪನಾ ಮಂಡಳಿ, ತೋವಿವಿ, ಬಾಗಲಕೋಟ<br>ಆರ್ಥಿಕ ಇಲಾಖೆ, ವಿಧಾನ ಸೌಧ, ಬೆಂಗಳೂರು-560 001. | : | ಸದಸ್ಯರು |
| | **Mrs. Padmavathi**<br>Special Secretary to GOK, Dept. of Finance<br>Representative of Principal Secretary GOK and<br>Member, Board of Management, UHS,<br>Bagalkot, Department of Finance, Vidhana<br>Soudha, Bengaluru-560001. | : | Member |
| 4. | ಡಾ. ಎನ್. ರಾಜೇಶ್ವರಿ<br>ಸದಸ್ಯರು, ವ್ಯವಸ್ಥಾಪನಾ ಮಂಡಳಿ, ತೋವಿವಿ, ಬಾಗಲಕೋಟ<br>ನಂ. 36, ಬೇವುಬೆಲ್ಲ, 1ನೇ ಕ್ರಾಸ್, ವಿದ್ಯಾನಗರ,<br>ಶಿವಮೊಗ್ಗ-577203. | : | ಸದಸ್ಯರು |
| | **Dr. N. Rajeshwari**<br>Member, Board of Management, UHS, Bagalkot<br>No. 36, Bevubella, 1st Cross, Vidyanagara,<br>Shivamogga-577203. | : | Member |

| | | | |
|---|---|---|---|
| 5. | ಶ್ರೀ ಎಸ್. ಎನ್. ಮಂಜುನಾಥಗೌಡ<br>ಸದಸ್ಯರು, ವ್ಯವಸ್ಥಾಪನಾ ಮಂಡಳಿ, ತೋವಿವಿ, ಬಾಗಲಕೋಟೆ<br>ಶೆಟ್ಟಿಮಾದಮಂಗಲ ಗ್ರಾಮ, ವೆಲಗಲಬುರ್ರೆ (ಅಂಚೆ), ವಯಾ ದಳಸನೂರು, ಮದನಹಳ್ಳಿ ಪಂಚಾಯಿತು-563126, ತಾಲ್ಲೂಕು ಮತ್ತು ಜಿಲ್ಲೆ: ಕೋಲಾರ. | : | ಸದಸ್ಯರು |
| | **Sri S. N. Manjunathagowda**<br>Member, Board of Management, UHS, Bagalkote<br>Shettymadamangala Village,<br>Velagalaburre Post, Via Dalasanur, Madanahally Panchayath-563126, Tq & Dist : Kolar. | : | Member |
| 6. | ಶ್ರೀ ಆರ್. ಎಂ. ನಾಗೇಶ್<br>ಸದಸ್ಯರು, ವ್ಯವಸ್ಥಾಪನಾ ಮಂಡಳಿ, ತೋವಿವಿ, ಬಾಗಲಕೋಟೆ<br>ನಂ. 25, ಜುಬಿಲಿ ಶಾಲೆ ಹತ್ತಿರ, ಪಾಪರೆಡ್ಡಿಪಾಳ್ಯ, ನಾಗರಬಾವಿ, ಬೆಂಗಳೂರು-560 072. | : | ಸದಸ್ಯರು |
| | **Sri R. M. Nagesh**<br>Member, Board of Management,UHS,Bagalkote<br>No. 25, Near Jubilee School, Papareddy Palya, Nagarbhavi, Bengaluru-560 072. | : | Member |
| 7. | ಶ್ರೀ ಯೋಗಿರಾಜ ಬಿ. ಪಾಟೀಲ<br>ಸದಸ್ಯರು, ವ್ಯವಸ್ಥಾಪನಾ ಮಂಡಳಿ, ತೋವಿವಿ, ಬಾಗಲಕೋಟೆ<br>ನಂ. 142, "ಸದ್ಗುರು", 5ನೇ ಕ್ರಾಸ್, ಕುಸುಮನಗರ ಮುಖ್ಯ ರಸ್ತೆ, ವೈದ್ಯ ಮಠ ಸಂಕೀರ್ಣ ಹಿಂದುಗಡೆ, ಧಾರವಾಡ-580008. | : | ಸದಸ್ಯರು |
| | **Dr. Yogiraj B. Patil**<br>Member, Board of Management, UHS, Bagalkot<br>No. 142, "Sadguru", 5th Cross<br>Kusumnagar Main Road, Backside of Vaidya Math Complex, Dharwad-580008. | : | Member |
| 8. | ಡಾ. ಕೆ. ಎಮ್. ಇಂದಿರೇಶ<br>ಶಿಕ್ಷಣ ನಿರ್ದೇಶಕರು ಹಾಗೂ ಸದಸ್ಯರು,<br>ವ್ಯವಸ್ಥಾಪನಾ ಮಂಡಳಿ, ತೋವಿವಿ, ಬಾಗಲಕೋಟೆ. | : | ಸದಸ್ಯರು |
| | **Dr. K. M. Indiresh**<br>Director of Education and Member<br>Board of Management, UHS, Bagalkote. | : | Member |
| 9. | ಡಾ. ಟಿ. ಬಿ. ಅಲ್ಲೊಳ್ಳಿ<br>ಕುಲಸಚಿವರು ಹಾಗೂ ಸದಸ್ಯ ಕಾರ್ಯದರ್ಶಿಗಳು,<br>ವ್ಯವಸ್ಥಾಪನಾ ಮಂಡಳಿ, ತೋವಿವಿ, ಬಾಗಲಕೋಟೆ. | : | ಸದಸ್ಯ ಕಾರ್ಯದರ್ಶಿಗಳು |
| | **Dr. T. B. Allolli**<br>Registrar & Member-Secretary,<br>Board of Management, UHS, Bagalkote. | : | Member Secretary |

ಆರಂಭದಲ್ಲಿ, ಕುಲಸಚಿವರು ಹಾಗೂ ಸದಸ್ಯ ಕಾರ್ಯದರ್ಶಿಗಳು ವ್ಯವಸ್ಥಾಪನ ಮಂಡಳಿಯ 53ನೇ (ತುರ್ತು) ಸಭೆಗೆ ಅಧ್ಯಕ್ಷರು ಹಾಗೂ ಎಲ್ಲ ಸದಸ್ಯರುಗಳನ್ನು ಸ್ವಾಗತಿಸಿದರು. ಕುಲಸಚಿವರು ಗೌರವಾನ್ವಿತ ಕುಲಪತಿಗಳು ಹಾಗೂ ಅಧ್ಯಕ್ಷರು ಇವರಿಗೆ ಸಭೆಯನ್ನು ಕೈಗೊಂಡು ಕಾರ್ಯಸೂಚಿಗಳನ್ವಯ ಚರ್ಚೆಗಳನ್ನು ಕೈಗೊಳ್ಳಲು ವಿನಂತಿಸಿದರು. ಸಭೆಯಲ್ಲಿ ಮಂಡಿಸಿದ ಈ ಕೆಳಗಿನ ಕಾರ್ಯಸೂಚಿಗಳ ಮೇಲೆ ಸುದೀರ್ಘ ಚರ್ಚೆಗಳನ್ನು ಕೈಗೆತ್ತಿಕೊಂಡು ಈ ಕೆಳಗಿನಂತೆ ನಿರ್ಣಯಗಳನ್ನು ಕೈಗೊಳ್ಳಲಾಯಿತು.

At the outset, the Registrar and Member Secretary welcomed Chairman and members of the Board of Management to the 53rd (Emergent) meeting. The Registrar requested the Hon'ble Vice Chancellor and Chairman to chair the meeting and to conduct the deliberations as per the agenda for discussion. After the detailed deliberations and discussions on the agenda subjects, the following decisions were resolved during the Board meeting.

| | |
|---|---|
| ಕಾರ್ಯಸೂಚಿ ಸಂ. 1 | ದಿನಾಂಕ 01.10.2019 ರಂದು ಜರುಗಿದ ವ್ಯವಸ್ಥಾಪನ ಮಂಡಳಿಯ 52ನೇ ಸಭೆಯ ನಡುವಳಿಗಳ ದೃಢೀಕರಣ. |
| | ಚರ್ಚೆ ಮತ್ತು ಠರಾವು :<br>ವ್ಯವಸ್ಥಾಪನಾ ಮಂಡಳಿಯ 52ನೇ ಸಭೆಯ ನಡುವಳಿಗಳ ಮೇಲೆ ಕೆಲವು ಗೌರವಾನ್ವಿತ ಸದ್ಯರುಗಳಿಂದ ಸ್ವೀಕೃತಗೊಂಡ ಆಕ್ಷೇಪಣೆಗಳನ್ನು ಸದಸ್ಯ ಕಾರ್ಯದರ್ಶಿಗಳು ಸಭೆಯಲ್ಲಿ ಮಂಡಿಸಿದರು. ಆಕ್ಷೇಪಣೆಗಳನ್ನು ಒಂದೊಂದಾಗಿ ವಿವರವಾದ ಚರ್ಚೆಯ ನಂತರ, ದಿನಾಂಕ 01.10.2019 ರಂದು ಜರುಗಿದ ವ್ಯವಸ್ಥಾಪನಾ ಮಂಡಳಿಯ 52ನೇ ಸಭೆಯ ನಡುವಳಿಗಳನ್ನು ಮಂಡಳಿಯು ದೃಢೀಕರಿಸಿತು. |
| **Item No.1** | **Confirmation of the minutes of the 52nd meeting of the Board of Management held on 01.10.2019.** |
| | **Discussion and Resolution :**<br>The comments received from some of the Hon'ble Members on the minutes of 52nd meeting of Board of Management were presented in the meeting by the Member Secretary. After going through the comments one by one and detailed discussion, Board confirmed the minutes of the 52nd meeting of Board of Management held on 01.10.2019. |
| ಕಾರ್ಯಸೂಚಿ ಸಂ. 2 | ದಿನಾಂಕ 01-10-2019 ರಂದು ನಡೆದ ತೋವಿವಿ, ಬಾಗಲಕೋಟದ ವ್ಯವಸ್ಥಾಪನಾ ಮಂಡಳಿಯ 52ನೇ ಸಭೆಯ ನಡುವಳಿಗಳ ಮೇಲೆ ತೆಗೆದುಕೊಂಡ ಕ್ರಮ. |
| | ಚರ್ಚೆ ಮತ್ತು ಠರಾವು :<br>ವಿಶ್ವವಿದ್ಯಾಲಯವು ತೆಗೆದುಕೊಂಡ ಕ್ರಮಗಳನ್ನು ಮಂಡಳಿಯು ಅವಲೋಕಿಸಿತು ಮತ್ತು ಅದರ ಪ್ರಗತಿಗೆ ತನ್ನ ಒಪ್ಪಿಗೆಯನ್ನು ವ್ಯಕ್ತಪಡಿಸಿತು. ಕೈಗೊಂಡ ಕ್ರಮಗಳಿಗೆ ಮಂಡಳಿಯು ವಿವಿಧ ಕಾರ್ಯಗಳಿಗೆ ಈ ಕೆಳಗಿನ ಸಲಹೆಗಳೊಂದಿಗೆ ತನ್ನ ಅನುಮೋದನೆಯನ್ನು ನೀಡಿತು ;<br>**ಕಾರ್ಯಸೂಚಿ ಸಂ. 16:** ಗೌರವಾನ್ವಿತ ಸದಸ್ಯರಾದ ಶ್ರೀ ಆರ್. ಚೌಡಾರೆಡ್ಡಿ ತೂಪಲ್ಲಿರವರು ಗುತ್ತಿಗೆದಾರರಿಗೆ ಹಣ ಪಾವತಿಸಲು ವಿಳಂಬವಾಗಿರುವ ಕಾರಣ ಬಗ್ಗೆ ಕೇಳಿದರು. ವಿಶ್ವವಿದ್ಯಾಲಯದ ಮಾನದಂಡಗಳ ಪ್ರಕಾರ ಸದರಿ ಪ್ರಕ್ರಿಯೆಯನ್ನು ಪೂರ್ಣಗೊಳಿಸಲು ಇನ್ನೂ ಸಮಯದ ಅವಶ್ಯಕತೆ ಇರುತ್ತದೆ ಎಂದು ಅಧ್ಯಕ್ಷರು ತಿಳಿಸಿದರು. ಅಲ್ಲದೇ, ಹಣ ಪಾವತಿಸಲು ಆದ ವಿಳಂಬಕ್ಕಾಗಿ ಆಸ್ತಿ ಅಧಿಕಾರಿಗಳನ್ನು ಸಹ ವಿವರಣೆಗಾಗಿ ಸಭೆಗೆ ಕರೆಸಲಾಯಿತು, ಇದಕ್ಕೆ ಅವರು ಅಧ್ಯಕ್ಷರು ವ್ಯಕ್ತಪಡಿಸಿದ ಅಭಿಪ್ರಾಯಗಳನ್ನು ನೀಡಿದರು. ಆದಾಗ್ಯೂ, ಸದಸ್ಯರ ಒತ್ತಾಯದಂತೆ, 2-3 ದಿನಗಳ ಬದಲಾಗಿ ಒಂದು ವಾರದೊಳಗೆ ಹಣ ಪಾವತಿಸಲಾಗುವುದು ಎಂದು ಸಭೆಗೆ ಭರವಸೆ ನೀಡಿದರು.<br>(ಕ್ರಮ: ಆಸ್ತಿ ಅಧಿಕಾರಿಗಳು) |
| **Item No.2** | **Action taken report on the minutes of the 52nd meeting of Board of Management held on 01-10-2019.** |
| | **Discussion and Resolution :**<br>The Board perused the action taken report and expressed its consent over the progress made. The Board accorded its approval for the actions taken with following suggestions under various items ; |

| | |
|---|---|
| | **Item No. 16:** Hon'ble Member Sri R. Chowda Reddy Thoopalli vehemently sought the reason for delay in payment to the contractor. The Chairman informed that, still more time is required to process the bill by the norms of the University. Meanwhile, Estate Officer was also called for clarification for delay in payment for which he shared the views expressed by the Chairman. However, they assured the Board that, payment will be made within a week, in spite of 2-3 days as insisted by the members.<br>**(Action: Estate Officer)** |
| ಕಾರ್ಯಸೂಚಿ ಸಂ.3 | ಸಿ.ಎ.ಎಸ್.2006 ರ ಅಡಿಯಲ್ಲಿ ಶಿಕ್ಷಕರಿಗೆ ಉನ್ನತೀಕರಿಸಲು ಅನುಮೋದನೆಗಾಗಿ ಕುರಿತು. |
| ಕಾರ್ಯಸೂಚಿ ಸಂ.4 | ಸಿ.ಎ.ಎಸ್.2006 ರ ಅಡಿಯಲ್ಲಿ ಶಿಕ್ಷಕರನ್ನು ಪ್ರಾಧ್ಯಾಪಕರಿಂದ ಪ್ರಾಧ್ಯಾಪಕ (ಹೆಚ್‌ಎಜಿ)ಗೆ ಉನ್ನತೀಕರಿಸಲು ಅನುಮೋದನೆಗಾಗಿ ಕುರಿತು. |
| ಕಾರ್ಯಸೂಚಿ ಸಂ. 5 | ಸೇವಾ ಸಿಬ್ಬಂದಿಗಳ ಪದೋನ್ನತಿ (ಉಪ ಆಡಳಿತಾಧಿಕಾರಿಗಳು, ಉಪ ಹಣಕಾಸು ನಿಯಂತ್ರಣಾಧಿಕಾರಿಗಳು ಮತ್ತು ಕಾರ್ಯನಿರ್ವಾಹಕ ಅಭಿಯಂತರರು ಹುದ್ದೆಗಳಿಗೆ) |
| | ಚರ್ಚೆ ಮತ್ತು ಠರಾವು :<br>ಮಂಡಳಿಯ ಕೆಲವು ಸದಸ್ಯರು ರಾಜ್ಯದ 15 ಜಿಲ್ಲೆಗಳಿಗೆ ಉಪಚುನಾವಣೆಯ ದೃಷ್ಟಿಯಿಂದ ವಿಧಿಸಲಾದ ಮಾದರಿ ನೀತಿ ಸಂಹಿತೆಯ ಬಗ್ಗೆ ಅಭಿಪ್ರಾಯ ವ್ಯಕ್ತಪಡಿಸಿದರು. ಮಂಡಳಿಯ ಸದಸ್ಯರಿಗೆ ಬಾಗಲಕೋಟೆಯು ಮಾದರಿ ನೀತಿ ಸಂಹಿತೆಯ ವ್ಯಾಪ್ತಿಗೆ ಬರುವುದಿಲ್ಲ ಎಂದು ಅಧ್ಯಕ್ಷರು ಮನವರಿಕೆ ಮಾಡಿದಾಗ್ಯೂ ಕಾರ್ಯಸೂಚಿ ಸಂ. 3, 4 & 5 ಗಳನ್ನು ವ್ಯವಸ್ಥಾಪನಾ ಮಂಡಳಿಯಿಂದ ಮುಂದೂಡಲಾಯಿತು. ಮುಂದುವರೆದು, ಮಂಡಳಿಯು ಕಾರ್ಯಸೂಚಿಗಳನ್ನು ಮುಂದೂಡಿತು ರಾಜ್ಯದ 15 ಜಿಲ್ಲೆಗಳಿಗೆ ಉಪಚುನಾವಣೆಯ ಹಿನ್ನೆಲೆಯಲ್ಲಿ ವಿಧಿಸಲಾದ ಮಾದರಿ ನೀತಿ ಸಂಹಿತೆ ಸಂದರ್ಭದಲ್ಲಿ ಕಾರ್ಯಸೂಚಿಯನ್ನು ಮಂಡಿಸಿದಂತೆ ತೋವಿವಿ, ಬಾಗಲಕೋಟೆಯ ಶಿಕ್ಷಕರಿಗೆ ಸಿಎಎಸ್ ಅಡಿಯಲ್ಲಿ ಬಡ್ತಿ ಮತ್ತು ಸೇವಾ ಸಿಬ್ಬಂದಿಗಳ (ಗ್ರೂಪ್-ಎ) ಬಡ್ತಿಗಳನ್ನು ಸಹ ನೀಡಲು ನೀಡುವ ಬಗ್ಗೆ ಸೂಕ್ತ ಪ್ರಾಧಿಕಾರದಿಂದ ಸ್ಪಷ್ಟೀಕರಣ ಪಡೆಯಲು ಮಂಡಳಿಯು ವಿಶ್ವವಿದ್ಯಾಲಯಕ್ಕೆ ನಿರ್ದೇಶನ ನೀಡಿತು. ಇದಲ್ಲದೆ, ಸಿಎಎಸ್ ಜಾರಿಗೆ ಬಂದರೆ ಉಂಟಾಗುವ ಹಣಕಾಸಿನ ಪರಿಣಾಮಗಳ ಕುರಿತು ತಯಾರಿ ಮಾಡಲು ಮಂಡಳಿಯು ವಿಶ್ವವಿದ್ಯಾಲಯಕ್ಕೆ ಸಲಹೆ ನೀಡಿತು.<br>(ಕ್ರಮ: ಕುಲಸಚಿವರು) |
| **Item No.3** | **Approval for up-gradation of teachers under CAS-2006 Scheme.** |
| **Item No.4** | **Approval for up-gradation of teachers from Professor to Professor (HAG) under CAS-2006 Scheme.** |
| **Item No. 5** | **Promotion of Service Personnel (to the post of Deputy Administrative Officer, Deputy Comptroller and Executive Engineer)** |
| | **Discussion and Resolution :**<br>Some of the Board members expressed the concern about model code of conduct imposed in view of by-elections spread over to 15 districts of the state. Hence, the item No. 3, 4 and 5 were deferred by the Board of Management. In spite of Chairman efforts to convince the members of the Board that, the Bagalkote is not coming under the jurisdiction of Model Code of Conduct. Further, Board deferred the items and directed the University to get clarification from concern authority regarding promotion of teachers under CAS and also promotion to the Service Personnel of UHS, Bagalkote (Group-A) as put up in the Agenda during the Model Code of Conduct in |

| | |
|---|---|
| | 15 districts of state and put up the agenda to the next meeting for approval. Further, Board also suggested the University to work out financial implications to be incurred, if CAS is implemented.<br>**(Action: Registrar)** |
| ಕಾರ್ಯಸೂಚಿ ಸಂ. 6 | ತೋವಿವಿ, ಬಾಗಲಕೋಟೆಯಿಂದ ಕೃತೋವಿವಿ, ಶಿವಮೊಗ್ಗಕ್ಕೆ ಸ್ವನಾಶೀಕರಣದ **(REPATRIATION)** ಮೇಲೆ ಶಿಕ್ಷಕರನ್ನು ವರ್ಗಾವಣೆ ಮಾಡುವ ಕುರಿತು. |
| | ಚರ್ಚೆ ಮತ್ತು ಠರಾವು :<br>ಈ ವಿಷಯದ ಕುರಿತು ತೋಟಗಾರಿಕೆ ಸಚಿವಾಲಯ, ಕರ್ನಾಟಕ ಸರ್ಕಾರ, ಬೆಂಗಳೂರು ಇವರ ಪತ್ರ ಸಂ. ತೋಇ 237 ತೋಇವಿ 2019, ದಿನಾಂಕ 21-11-2019 ರನ್ವಯ ಸದರಿ ವಿಷಯು ಸರ್ಕಾರದ ಹಂತದಲ್ಲಿ ಮರುಪರಿಶೀಲಿಸಲಾಗುತ್ತಿರುವುದರಿಂದ ಈ ಪ್ರಸ್ತಾವನೆಯನ್ನು ಮಂಡಳಿಯು ಪರಿಗಣಿಸಿರುವುದಿಲ್ಲ.<br>(ಕ್ರಮ: ಕುಲಸಚಿವರು) |
| **Item No. 6** | **Transfer of teachers from UHS, Bagalkote to UAHS, Shivamogga on repatriation.** |
| | **Discussion & Resolution :**<br>Board did not consider the proposal, in view of directions received from Government vide letter vide No. ತೋಇ 237 ತೋಇವಿ 2019, dated 21-11-2019 of Horticulture Secretariat, GOK, Bengaluru; as the issue is being re-examined at Government level.<br>**(Action: Registrar)** |
| ಕಾರ್ಯಸೂಚಿ ಸಂ. 7 | ತೋಟಗಾರಿಕೆ ಮಹಾವಿದ್ಯಾಲಯ, ಬೆಂಗಳೂರಿನ ಆವರಣದಲ್ಲಿ ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ ಅಡಿಯಲ್ಲಿ "ತೋಟಗಾರಿಕಾ ಅಂಗಾಂಶ ಪ್ರಯೋಗಾಲಯ" **(Tissue Culture Laboratory)** ಮತ್ತು ಸಂಬಂಧಿತ ಇತರೆ ಕೆಲಸಗಳ ಕಟ್ಟಡ ನಿರ್ಮಿಸುವ ಕುರಿತು ಟೆಂಡರ್ ಆಹ್ವಾನಿಸಲು ವಿಶ್ವವಿದ್ಯಾಲಯದಿಂದ ತೆಗೆದುಕೊಂಡ ಕ್ರಮವನ್ನು ಸ್ಥಿರೀಕರಿಸುವ ಕುರಿತು. |
| ಕಾರ್ಯಸೂಚಿ ಸಂ. 8 | ತೋಟಗಾರಿಕೆ ಸಂಶೋಧನಾ ಮತ್ತು ವಿಸ್ತರಣಾ ಕೇಂದ್ರ, ಹಾಸನ ಆವರಣದಲ್ಲಿ ಆವರಣದಲ್ಲಿ ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ ಅಡಿಯಲ್ಲಿ "ತೋಟಗಾರಿಕಾ ಅಂಗಾಂಶ ಪ್ರಯೋಗಾಲಯ" **(Tissue Culture Laboratory)** ಮತ್ತು ಸಂಬಂಧಿತ ಇತರೆ ಕೆಲಸಗಳ ಕಟ್ಟಡ ನಿರ್ಮಿಸುವ ಕುರಿತು ಟೆಂಡರ್ ಆಹ್ವಾನಿಸಲು ವಿಶ್ವವಿದ್ಯಾಲಯದಿಂದ ತೆಗೆದುಕೊಂಡ ಕ್ರಮವನ್ನು ಸ್ಥಿರೀಕರಿಸುವ ಕುರಿತು. |
| | ಚರ್ಚೆ ಮತ್ತು ಠರಾವು :<br>ಕಾರ್ಯಸೂಚಿ ಸಂ. 7 & 8 ಗಳ ಕುರಿತು ವಿವರವಾಗಿ ಚರ್ಚಿಸಿ ಹಾಗೂ ಅವಶ್ಯಕತೆಯನ್ನು ಹಾಗೂ ಸರ್ಕಾರದಿಂದ ಮಂಜೂರಾಗಿರುವ ಅನುದಾನವನ್ನು ದಿನಾಂಕ 31.3.2019 (ಆರ್ಥಿಕ ವರ್ಷ 2019-20) ರ ಒಳಗಾಗಿ ಬಳಸಿಕೊಳ್ಳಬೇಕಾಗಿರುವುದನ್ನು ಮಂಡಳಿಯು ಪರಿಗಣಿಸಿ, ತೋಟಗಾರಿಕೆ ಮಹಾವಿದ್ಯಾಲಯ, ಬೆಂಗಳೂರು ಮತ್ತು ತೋಟಗಾರಿಕೆ ಸಂಶೋಧನಾ ಮತ್ತು ವಿಸ್ತರಣಾ ಕೇಂದ್ರ, ಹಾಸನ ಆವರಣಗಳಲ್ಲಿ ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ ಅಡಿಯಲ್ಲಿ "ತೋಟಗಾರಿಕಾ ಅಂಗಾಂಶ ಪ್ರಯೋಗಾಲಯ" (Tissue Culture Laboratory) ಮತ್ತು ಸಂಬಂಧಿತ ಇತರೆ ಕೆಲಸಗಳ ಕಟ್ಟಡ ನಿರ್ಮಿಸುವ ಕುರಿತು ಟೆಂಡರ್ ಆಹ್ವಾನಿಸಲು ವಿಶ್ವವಿದ್ಯಾಲಯದಿಂದ ತೆಗೆದುಕೊಂಡ ಕ್ರಮಗಳನ್ನು ಸ್ಥಿರೀಕರಿಸಿತು. ಮುಂದುವರೆದು, ಡಾ. ವೈ. ಬಿ. ಪಾಟೀಲರವರು ಈ ಕುರಿತು ಪ್ರಸ್ತಾವನೆಯನ್ನು ಕಳುಹಿಸುವಾಗ ಮಣ್ಣು ತಡೆದುಕೊಳ್ಳುವ ಶಕ್ತಿ ಮತ್ತು ಜಾಗ ಆಯ್ಕೆ ವರದಿಗಳ ಕುರಿತು ಸ್ಪಷ್ಟೀಕರಣವನ್ನು ಕೇಳಿದರು. ಡಾ. ರಾಜೇಶ್ವರಿ ಎನ್, ಇವರು ಎರಡೂ ಪ್ರಯೋಗಾಲಗಳಿಗೆ ಅಂದಾಜಿನ ವ್ಯತ್ಯಾಸದ ಬಗ್ಗೆ ಸದಸ್ಯರ ಗಮನವನ್ನು ಸೆಳೆದರು; ಅಂದಾಜು ವೆಚ್ಚ ಸಣ್ಣ ಪ್ರದೇಶಕ್ಕೆ ಹೆಚ್ಚು ಮತ್ತು ಹೆಚ್ಚಿನ ಪ್ರದೇಶಕ್ಕೆ ಕಡಿಮೆ. ಆಸ್ತಿ ಅಧಿಕಾರಿಗಳು ಹಾಸನ ವಲಯದ ದರಪಟ್ಟಿಯ ಮೂಲ ದರವು ಬೆಂಗಳೂರು ವಲಯದ ದರಪಟ್ಟಿಯ ಮೂಲ ದರಕ್ಕಿಂತ ಹೆಚ್ಚಿದೆ ಎಂದು ಡಾ. ರಾಜೇಶ್ವರಿರವರ ಪ್ರಶ್ನೆಗೆ ಸ್ಪಷ್ಟೀಕರಣವನ್ನು ನೀಡಿದರು.<br>(ಕ್ರಮ: ಆಸ್ತಿ ಅಧಿಕಾರಿಗಳು) |

| | |
|---|---|
| **Item No. 7** | **Ratification of action taken by the University to invite tender for construction of Tissue Culture Laboratory and related allied works under RKVY Project at COH, Bengaluru Campus.** |
| **Item No. 8** | **Ratification of action taken by the University to invite tender for construction of Tissue Culture Laboratory and related allied works under RKVY Project at HREC, Hassan Campus.** |
| | **Discussion & Resolution :**<br>Board deliberated the item No. 7 & 8 and considering the urgency and utilization of budget released by the Government by 31.03.2019 (F.Y.2019-20), the Board ratified the action taken by the University in inviting tender for construction of Tissue Culture Laboratory and related allied works under RKVY Project at COH, Bengaluru and HREC, Hassan Campuses. Further, Dr. Y. B. Patil, sought the clarification regarding Soil Bearing Capacity and Site Selection Report, while sending proposal in this regard. Dr. Rajeshwari N., sought the attention of members regarding variation in estimation for both the laboratories; as the estimated cost was more for small area and less for more area. The Estate Officer gave clarification that, the basic rates of the Hassan circle S.R. are more than basic rates of S.R. of Bengaluru to the question raised by Dr. Rajeshwari, member.<br>**(Action: Estate Officer)** |
| **ಕಾರ್ಯಸೂಚಿ ಸಂ. 9** | **ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಉದ್ಯಾನಗಿರಿ ಆವರಣದಲ್ಲಿನ ಪ್ರೇಕ್ಷಾಗೃಹ (850 ಸಾಮರ್ಥ್ಯ) ಕಟ್ಟಡಕ್ಕೆ ಧ್ವನಿವರ್ಧಕ ವ್ಯವಸ್ಥೆ ಹಾಗೂ ಇತರೆ ಅವಶ್ಯಕ ಕಾಮಗಾರಿಗಳಿಗೆ ಅನುಮೋದನೆ ನೀಡುವ ಕುರಿತು.** |
| | ಚರ್ಚೆ ಮತ್ತು ಠರಾವು :<br>ಮಂಡಳಿಯು, ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಉದ್ಯಾನಗಿರಿ ಆವರಣದಲ್ಲಿನ ಪ್ರೇಕ್ಷಾಗೃಹ (850 ಸಾಮರ್ಥ್ಯ) ಕಟ್ಟಡಕ್ಕೆ ಧ್ವನಿವರ್ಧಕ ವ್ಯವಸ್ಥೆ ಹಾಗೂ ಇತರೆ ಅವಶ್ಯಕ ಕಾಮಗಾರಿಗಳಿಗೆ ಅನುಮೋದನೆ ಕುರಿತ ಪ್ರಸ್ತಾವನೆಯನ್ನು ಪರಿಶೀಲಿಸಿತು. ಸುದೀರ್ಘ ಚರ್ಚೆಯ ನಂತರ, ಸದರಿ ಪ್ರಸ್ತಾವನೆಗೆ ಮಂಡಳಿಯು ಅನುಮೋದನೆ ನೀಡಿತು. ಮುಂದುವರೆದು, ಮಂಡಳಿಯು, ತೋವಿವಿ ಮತ್ತು ಕೆಟಿಪಿಪಿ ಕಾಯ್ದೆಯ ನಿಯಮಾವಳಿಗಳ ಅನುಸಾರ ಟೆಂಡರ್ ಕರೆಯಲು ವಿಶ್ವವಿದ್ಯಾಲಯಕ್ಕೆ ನಿರ್ದೇಶನ ನೀಡಿತು.<br>(ಕ್ರಮ: ಆಸ್ತಿ ಅಧಿಕಾರಿಗಳು) |
| **Item No. 9** | **Approval to invite tender for providing audio and allied works for Auditorium Hall (850 capacity) at Udyanagiri, University of Horticultural Sciences, Bagalkote.** |
| | **Discussion & Resolution :**<br>The Board examined the proposal for approval to invite tender for providing audio and allied works for Auditorium Hall (850 capacity) at Udyanagiri, University of Horticultural Sciences, Bagalkote. After detailed deliberations, Board accorded its approval for the same. Further, Board directed the University to invite the tender in this regard as per the norms of UHS and KTPP Act.<br>**(Action: Estate Officer)** |

| | |
|---|---|
| ಕಾರ್ಯಸೂಚಿ ಸಂ. 10 | ತೋವಿವಿ, ಬಾಗಲಕೋಟೆಯ ಶಿಕ್ಷಕರುಗಳ ನೇರ ನೇಮಕಾತಿ ಮತ್ತು ಪದೋನ್ನತಿಗಾಗಿ ಬಾಹ್ಯ ತಜ್ಞರ ಪಟ್ಟಿ ಅನುಮೋದನೆ. |
| | ಚರ್ಚೆ ಮತ್ತು ಠರಾವು :<br>ತೋವಿವಿ, ಬಾಗಲಕೋಟೆಯ ಶಿಕ್ಷಕರುಗಳ ನೇರ ನೇಮಕಾತಿ ಮತ್ತು ಪದೋನ್ನತಿಗಾಗಿ ಬಾಹ್ಯ ತಜ್ಞರ ಪಟ್ಟಿ ಅನುಮೋದಿಸುವ ಪ್ರಸ್ತಾವನೆಯನ್ನು ಮಂಡಳಿಯು ಪರಿಶೀಲಿಸಿತು. ಅಧ್ಯಕ್ಷರು ಮತ್ತು ಸದಸ್ಯ ಕಾರ್ಯದರ್ಶಿಗಳು ಇವರುಗಳಿಂದ ಮಾಹಿತಿಯನ್ನು ಪಡೆದ ನಂತರ, ಮಂಡಳಿಯು ಸದರಿ ಪಟ್ಟಿಗೆ ತನ್ನ ಅನುಮೋದನೆಯನ್ನು ನೀಡಿತು. ಮುಂದುವರೆದು, ಈ ಕುರಿತು ನಡುವಳಿಗಳ ಧೃಡೀಕರಣಕ್ಕಾಗಿ ಕಾಯದೇ ಅಧಿಸೂಚನೆಯನ್ನು ಹೊರಡಿಸುವಂತೆ ಮಂಡಳಿಯು ವಿಶ್ವವಿದ್ಯಾಲಯಕ್ಕೆ ನಿರ್ದೇಶಿಸಿತು.<br>(ಕ್ರಮ: ಕುಲಸಚಿವರು) |
| **Item No.10** | **Approval to the Panel of External Experts for Direct Recruitment & Promotion of teachers at UHS, Bagalkote.** |
| | **Discussion & Resolution :**<br>The Member Secretary presented the panel of External Experts for Direct Recruitment & Promotion of teachers. After getting the information from the Chairman and Member Secretary, the Board accorded its approval to the panel of External Experts for Direct Recruitment & Promotion of teachers. Further, Board directed the University to issue notification in this regard, without waiting for the confirmation of the minutes.<br>**(Action: Registrar)** |
| ಕಾರ್ಯಸೂಚಿ ಸಂ. 11 | ಕು. ನಂದಿನಿ, ಸಹಾಯಕ ಪ್ರಾಧ್ಯಾಪಕರು (ಅನುವಂಶಿಕ & ತಳಿ ಅಭಿವೃದ್ಧಿ), ಕೃವಿವಿ, ಧಾರವಾಡ ಇವರಿಗೆ ಕೃವಿವಿ ಧಾರವಾಡದಿಂದ ತೋಟಗಾರಿಕೆ ಮಹಾವಿದ್ಯಾಲಯ, ಮೈಸೂರು (ತೋ.ವಿ.ವಿ. ಬಾಗಲಕೋಟೆ) ಇಲ್ಲಿಗೆ ನಿಯೋಜನೆ ನೀಡುವ ಕುರಿತು. |
| | ಚರ್ಚೆ ಮತ್ತು ಠರಾವು :<br>ಮಂಡಳಿಯು, ಕು. ನಂದಿನಿ, ಸಹಾಯಕ ಪ್ರಾಧ್ಯಾಪಕರು, ಅನುವಂಶಿಕ & ತಳಿ ಅಭಿವೃದ್ಧಿ ವಿಭಾಗ, ಕೃವಿವಿ, ಧಾರವಾಡ ಇವರನ್ನು ತೋಟಗಾರಿಕೆ ಮಹಾವಿದ್ಯಾಲಯ, ಮೈಸೂರು (ತೋ.ವಿ.ವಿ. ಬಾಗಲಕೋಟೆ)ಗೆ ಮೂರು ವರ್ಷಗಳ ಕಾಲ ನಿಯೋಜನೆ ಕುರಿತು ವಿವರವಾದ ಚರ್ಚೆಗಳ ನಂತರ, ಸದರಿ ಪ್ರಸ್ತಾವನೆಯನ್ನು ಮುಂದೂಡಿತು. ಮುಂದುವರೆದು, ಮಂಡಳಿಯು ಸದರಿ ಕಾರ್ಯಸೂಚಿಯನ್ನು ಮುಂದಿನ ಸಭೆಗೆ ಅನುಮೋದನೆಗಾಗಿ ಮಂಡಿಸಲು ವಿಶ್ವವಿದ್ಯಾಲಯಕ್ಕೆ ನಿರ್ದೇಶಿಸಿತು.<br>(ಕ್ರಮ: ಕುಲಸಚಿವರು) |
| **Item No. 11** | **Deputation of Ms. Nandini, Assistant Professor (GPB) UAS, Dharwad to COH, Mysore (UHS, Bagalkote) – reg.** |
| | **Discussion & Resolution :**<br>Board examined the proposal for Deputation of Ms. Nandini, Assistant Professor, Dept of GPB, UAS, Dharwad to COH, Mysore (UHS, Bagalkote), after detailed deliberations, Board deferred the item and directed the University to put up the same to the next meeting for approval.<br>**(Action: Registrar)** |

ಟೇಬಲ್ ಕಾರ್ಯಸೂಚಿ

# TABLE AGENDA

| | |
|---|---|
| ಕಾರ್ಯಸೂಚಿ ಸಂ. 1 | ತೋವಿವಿ, ಬಾಗಲಕೋಟೆಯ 9ನೇ ಘಟಿಕೋತ್ಸವದ ಮುಖ್ಯ ಅತಿಥಿಗಳ ಪಟ್ಟಿಯನ್ನು ಅನುಮೋದನೆ ಕುರಿತು. |
| | ಚರ್ಚೆ ಮತ್ತು ಠರಾವು:<br>ಜನವರಿ–2020ರ ಎರಡನೇ ಪಕ್ಷದಲ್ಲಿ (ದಿನಾಂಕ 15ರ ನಂತರ) ತಾತ್ಕಾಲಿಕವಾಗಿ ಜರುಗಲಿರುವ ತೋವಿವಿ, ಬಾಗಲಕೋಟೆಯ 9ನೇ ಘಟಿಕೋತ್ಸವದ ಮುಖ್ಯ ಅತಿಥಿಗಳ ಪಟ್ಟಿಯನ್ನು ಸದಸ್ಯ ಕಾರ್ಯದರ್ಶಿಗಳು ಸಭೆಗೆ ಮಂಡಿಸಿದರು ಮತ್ತು ಮುಖ್ಯ ಅತಿಥಿಗಳ ಪಟ್ಟಿಯಲ್ಲಿರುವವರ ವಿವರಗಳನ್ನು ಮಂಡಳಿಯು ಅಪೇಕ್ಷಿಸಿತು. ಅಧ್ಯಕ್ಷರು ಮತ್ತು ಸದಸ್ಯ ಕಾರ್ಯದರ್ಶಿಗಳು ಇವರುಗಳಿಂದ ಮಾಹಿತಿಯನ್ನು ಪಡೆದ ನಂತರ, ಮಂಡಳಿಯು ಮುಖ್ಯ ಅತಿಥಿಗಳ ಪಟ್ಟಿಗೆ ಕ್ರಮವಾಗಿ ಈ ಕೆಳಗಿನಂತೆ ತನ್ನ ಅನುಮೋದನೆಯನ್ನು ನೀಡಿತು.<br>1. **Prof. Ramesh Chand**<br>Member<br>National Institution for Transforming India (NITI Aayog)<br>Government of India, 'B' Wing 5th Floor, NITI Aayog, New Delhi-01.<br>2. **Dr. Baldev Singh Dhillon**<br>Vice-Chancellor<br>Punjab Agricultural University, Ludhiana-14100, India.<br>3. **Dr. Trilochan Mohapatra**<br>Secretary, Department of Agricultural Research and Education, Govt. of India<br>Indian Council of Agricultural Research, Krishi Bhavan, New Delhi.<br>4. **Sri Sanjay Agarwal**<br>Secretary to Government,<br>Ministry of Agriculture, Co-operation & Farmers Welfare, Govt. of India, New De<br>5. **Dr. Anand Kumar Singh**<br>Dy. Director General (Horticulture Science), Division of Horticulture, ICAR, New<br>6 **Dr. Harsh Kumar Bhanwala**<br>Chairman<br>National Bank for Agriculture and Rural Development (NABARD), Mumbai.<br>7. **Dr. Ajit Kumar Mohanty**<br>Director,<br>Bhabha Atomic Research Centre, Department of Atomic Energy,<br>Government of India, New Delhi.<br>ಮುಂದುವರೆದು, ಮುಖ್ಯ ಅತಿಥಿಗಳ ಪಟ್ಟಿಯನ್ನು ಗೌರವಾನ್ವಿತ ರಾಜ್ಯಪಾಲರ ಅನುಮೋದನೆಗಾಗಿ ನಡುವಳಿಗಳ ದೃಢೀಕರಣಕ್ಕಾಗಿ ಕಾಯದೇ ಸಲ್ಲಿಸಲು ಮಂಡಳಿಯು ವಿಶ್ವವಿದ್ಯಾಲಯಕ್ಕೆ ನಿರ್ದೇಶಿಸಿತು.<br>(ಕ್ರಮ: ಕುಲಸಚಿವರು) |
| **Item No.1** | **Approval of Panel of Chief Guests for 9th Convocation, UHS, Bagalkote.** |
| | **Discussion & Resolution :**<br>The Member Secretary presented the panel of Chief Guest for the 9th Convocation to be held on tentatively 2nd fortnight of January, 2020 and Board desires to know about the credentials of the Chief Guests enlisted in the panel. After getting the information from the Chairman and Member Secretary, the Board approved the panel of Chief Guests in the order as under;<br>1. **Prof. Ramesh Chand**<br>Member<br>National Institution for Transforming India (NITI Aayog)<br>Government of India, 'B' Wing 5th Floor, NITI Aayog, New Delhi-01.<br>2. **Dr. Baldev Singh Dhillon**<br>Vice-Chancellor<br>Punjab Agricultural University, Ludhiana-14100, India.<br>3. **Dr. Trilochan Mohapatra**<br>Secretary, Department of Agricultural Research and Education, Govt. of India<br>Indian Council of Agricultural Research, Krishi Bhavan, New Delhi. |

| | |
|---|---|
| | 4. **Sri Sanjay Agarwal**<br>Secretary to Government,<br>Ministry of Agriculture, Co-operation & Farmers Welfare, Govt. of India, New Delhi.<br>5. **Dr. Anand Kumar Singh**<br>Dy. Director General (Horticulture Science), Division of Horticulture, ICAR, New Delhi.<br>6 **Dr. Harsh Kumar Bhanwala**<br>Chairman<br>National Bank for Agriculture and Rural Development (NABARD), Mumbai.<br>7. **Dr. Ajit Kumar Mohanty**<br>Director,<br>Bhabha Atomic Research Centre, Department of Atomic Energy,<br>Government of India, New Delhi.<br>Further, the Board directed the University to send panel of Chief Guests to Hon'ble Governor for the kind approval, without waiting for confirmation of the minutes.<br>**(Action: Registrar)** |
| **ಅಧ್ಯಕ್ಷರ ಅಪ್ಪಣೆ ಮೇರೆಗೆ ಇನ್ನಿತರ ವಿಷಯಗಳ ಚರ್ಚೆಗಳು**<br>**Any other discussions with permission of the Chair** | |
| **1.** | ಗೌರವಾನ್ವಿತ ಸದಸ್ಯರಾದ ಡಾ. ವೈ. ಬಿ. ಪಾಟೀಲರವರು, ವಿಶ್ವವಿದ್ಯಾಲಯದಲ್ಲಿ ಉಪ ಸಮಿತಿಗಳನ್ನು ರಚನೆಯ ಕುರಿತು ವಿಷಯ ಎತ್ತಿದರು. ಅಧ್ಯಕ್ಷರು, ಈ ಕುರಿತು ಸರ್ಕಾರದ ನಿರ್ದೇಶನ ಪತ್ರ ದಿನಾಂಕ 27-10-2018 ರನ್ವಯ ಸದರಿ ಸಮಿತಿಗಳನ್ನು ರಚಿಸಿರುವುದಿಲ್ಲ ಎಂದು ಸ್ಪಷ್ಟೀಕರಿಸಿದರು. |
| | Dr. Y. B. Patil, Hon'ble Member raised the issue regarding formation of sub-committees in the University. The Chairman clarified that, such committees have not been constituted in light of Govt. directions vide letter dated 27-10-2018. |
| **2.** | ಸಭೆಯಲ್ಲಿ ಡಾ. ಅಶೋಕ ಆಲೂರರವರಿಗೆ ಸಂಬಂಧಿಸಿದ ಈ ಕೆಳಗಿನ ವಿಷಯಗಳು ಮತ್ತೆ ಚರ್ಚೆಯಾದವು ;<br>1. ಗೌರವಾನ್ವಿತ ಸದಸ್ಯರು ಸದರಿಯವರನ್ನು ತೋವಿವಿ, ಬಾಗಲಕೋಟೆಯಿಂದ ಬಿ.ಇ.ಎಸ್.ಟಿ.ಐ. ವಿಶ್ವವಿದ್ಯಾಲಯ, ಆಂಧ್ರ ಪ್ರದೇಶಗೆ ತೋವಿವಿ ಅಧಿನಿಯಮ/ಪರಿನಿಯಮಗಳು ಮತ್ತು ಕೆಸಿಎಆರ್‌ಗಳಲ್ಲಿ ಅವಕಾಶವಿಲ್ಲದಿದ್ದರೂ ಬಿಡುಗಡೆಗೊಳಿಸಿರುವ ಬಗ್ಗೆ ಸ್ಪಷ್ಟೀಕರಣ ಕೇಳಿದರು. ಈ ವಿಷಯವನ್ನು ಕಾರ್ಯದರ್ಶಿಗಳು, ತೋಟಗಾರಿಕೆ ಇಲಾಖೆ, ಕರ್ನಾಟಕ ಸರ್ಕಾರದಿಂದ ಇವರಿಂದ ವಿಶ್ವವಿದ್ಯಾಲಯದ ಗಮನಕ್ಕೆ ತರಲಾಗಿದೆ ಎಂದು ಹಾಗೂ ಈ ಕುರಿತು ಸರ್ಕಾರದ ಕಾರ್ಯದರ್ಶಿಗಳು, ತೋಟಗಾರಿಕೆ ಇಲಾಖೆ, ಬೆಂಗಳೂರು ಇವರೊಂದಿಗೆ ಸಮಾಲೋಚಿಸಿ ನಿರ್ಧಾರವನ್ನು ತೆಗೆದುಕೊಳ್ಳಲಾಗುವುದು ಎಂದು ಅಧ್ಯಕ್ಷರು ಸಭೆಗೆ ತಿಳಿಸಿದರು.<br>2. ಕೃತಿಚೌರ್ಯದ ಬಗ್ಗೆ ಹಲವಾರು ಸದಸ್ಯರು ಮಂಡಳಿಯ ಗಮನಕ್ಕೆ ತಂದರು. ಈ ಕುರಿತು ಸಂಬಂಧಪಟ್ಟವರಿಗೆ ಟಿಪ್ಪಣಿ ನೀಡಿ, ವಿವರಣೆಯನ್ನು ಕೇಳಲಾಗಿದೆ ಎಂದು ಸದಸ್ಯ ಕಾರ್ಯದರ್ಶಿಗಳೂ ಸಭೆಗೆ ತಿಳಿಸಿದರು.<br>**(ಕ್ರಮ: ಆಡಳಿತಾಧಿಕಾರಿಗಳು)** |
| | The following issues regarding Dr. Ashok Alur were again surfaced in the meeting.<br>1. Hon'ble Members sought the clarification regarding his relief from UHS, Bagalkote to B.E.S.T.I. University, Andra Pradesh; though there is no provision in the UHS Act/Statues and KCS Rules. The Chairman informed the Board that, the matter was also brought to the notice of the University by the Secretary to Government, Department of Horticulture, GOK and decision will be taken in consultation with the Secretary to Government, Department of Horticulture, GOK in this regard. |

| | |
|---|---|
| | 2. Several members have drawn the attention of Board regarding issue of plagiarism. The Member Secretary explained that, a note has been issued to concern for calling explanation in this regard.<br>**(Action: Administrative Officer)** |
| **3.** | ಒಬ್ಬರಿಗೆ-ಒಂದೇ-ಹುದ್ದೆ ಕುರಿತು ಸುದೀರ್ಘವಾಗಿ ಚರ್ಚಿಸಲಾಯಿತು. ವಿಶ್ವವಿದ್ಯಾಲಯವು ಪ್ರಭಾರಿ ವ್ಯವಸ್ಥೆ ಮಾಡಲು ತೋವಿವಿ, ಬಾಗಲಕೋಟೆಯ ಆವರಣಗಳಲ್ಲಿ ಅಥವಾ ನಿರ್ದಿಷ್ಟ ಆವರಣದೊಳಗೆ ಸೇವಾ ಹಿರಿತನವನ್ನು ಅನುಸರಿಸುತ್ತಿದೆಯೇ ಎಂದು ಮಾನ್ಯ ಸದಸ್ಯರು ಕೇಳಿದರು. ಪ್ರಭಾರಿ ವ್ಯವಸ್ಥೆಗಳನ್ನು ವಿಶ್ವವಿದ್ಯಾಲಯದ ಜೇಷ್ಠತಾ ಆದಾರದ ಮೇಲೆ ವಿಶ್ವವಿದ್ಯಾಲಯವು ಮಾಡಲಾಗುತ್ತಿದೆ ಎಂದು ಅಧ್ಯಕ್ಷರು ಸ್ಪಷ್ಟೀಕರಣ ನೀಡಿದರು. ಮುಂದುವರೆದು, ಒಬ್ಬರಿಗೆ-ಒಂದೇ-ಹುದ್ದೆ ಪದ್ಧತಿಯನ್ನು ಕಟ್ಟುನಿಟ್ಟಾಗಿ ಜಾರಿಗೆ ತರಲಾಗುವುದು ಎಂದು ಭರವಸೆ ನೀಡಿದರು. |
| | The issue of One-Man-One-Post was discussed in length. Hon'ble members insisted to know whether University is following seniority across the campuses of the UHS-B or within a particular campus for making in-charge arrangements by the University. The Chairman clarified that, in-charge arrangements in the University are done as per the University seniority. However, Chairman assured the BOM that, One-Man-One-Post policy will be implemented strictly. |
| **4.** | ಶ್ರೀ ಚೌಡಾರೆಡ್ಡಿ ತೂಪಲ್ಲಿ, ಗೌರವಾನ್ವಿತ ಸದಸ್ಯರು ಇವರು ಮಲೇಷ್ಯಾದ ಶಿವರಾಮ ರಿಸರ್ಚ್ ಫಂಡೇಶನ್ ಅಂತರಾಷ್ಟ್ರೀಯ ವಿಚಾರ ಸಂಕಿರಣಕ್ಕಾಗಿ ಕೆಲವು ಶಿಕ್ಷಕರನ್ನು ನಿಯೋಜಿಸುವಂತೆ ವಿಶ್ವವಿದ್ಯಾಲಯವನ್ನು ಒತ್ತಾಯಿಸುವಾಗ, ವಿಶ್ವವಿದ್ಯಾಲಯದ ಒಬ್ಬ ವಿಜ್ಞಾನಿಯನ್ನು ನಿಯೋಜಿಸಲು ಅಧ್ಯಕ್ಷರು ಒಪ್ಪಿಗೆ ನೀಡಿದರು.<br>(ಕ್ರಮ: ಆಡಳಿತಾಧಿಕಾರಿಗಳು) |
| | Sri R. Chowda Reddy Thoopalli, Hon'ble member while insisting the University to depute some teachers for International Symposium by Shivaram Research Foundation in Malaysia, the Chairman agreed to depute one Scientist from the University.<br>**(Action: Administrative Officer)** |
| **5.** | ಮಂಡಳಿಯ ಸದಸ್ಯರು ಎಲ್ಲ ಮಹಾವಿದ್ಯಾಲಯ ಮತ್ತು ಸಂಶೋಧನಾ ಕೇಂದ್ರಗಳಿಗೆ ಸದಸ್ಯರುಗಳಿಂದ ಭೇಟಿ ನೀಡುವುದಾಗಿ ವಿಶ್ವವಿದ್ಯಾಲಯಕ್ಕೆ ತಿಳಿಸಿದರು, ಇದಕ್ಕಾಗಿ ವಿಶ್ವವಿದ್ಯಾಲಯದಿಂದ ವ್ಯವಸ್ಥೆ ಮಾಡಲು ಒಪ್ಪಿಗೆ ನೀಡಿದರು.<br>(ಕ್ರಮ: ಆಡಳಿತಾಧಿಕಾರಿಗಳು/ಆಸ್ತಿ ಅಧಿಕಾರಿಗಳು) |
| | Members insisted to visit all the Colleges and Research Stations by the Board members for which the Chairman agreed to arrange by the University.<br>**(Action: Administrative Officer/Estate Officer)** |
| **6.** | ಗೌರವಾನ್ವಿತ ಸದಸ್ಯರಾದ ಶ್ರೀ ಆರ್. ಎಂ. ನಾಗೇಶ, ಗ್ರಂಥಾಲಯ ಸಹಾಯಕ ಹುದ್ದೆಯಿಂದ ಸಹಾಯಕ ಗ್ರಂಥಪಾಲಕ (ರಾಜ್ಯ ವೇತನ ಶ್ರೇಣಿ) ಹುದ್ದೆಗೆ ಪದೋನ್ನತಿ ನೀಡುವ ಬಗ್ಗೆ ವಿಚಾರಿಸಿದರು. ವೃಂದ ಮತ್ತು ನೇಮಕಾತಿ ನಿಯಮ ತಿದ್ದುಪಡಿಗಾಗಿ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಕಳುಹಿಸಲಾಗಿದೆ ಮತ್ತು ಇದನ್ನು ಪರಿಶೀಲಿಸಲಾಗುವುದು ಎಂದು ಅಧ್ಯಕ್ಷರು ತಿಳಿಸಿದರು. |
| | Sri R. M. Nagesh, Hon'ble member enquired regarding the issue of promotion of Library Assistant to Assistant Librarian (State Scale) post. The Chairman told that, proposal was sent to Government and it will be examined. |

| | |
|---|---|
| **7.** | ಗೌರವಾನ್ವಿತ ಸದಸ್ಯರಾದ ಡಾ. ವೈ. ಬಿ. ಪಾಟೀಲರವರು ವಿಶ್ವವಿದ್ಯಾಲಯದ ಮುಂಬರುವ ಘಟಿಕೋತ್ಸವದಲ್ಲಿ ಕೃಷಿ ಕ್ಷೇತ್ರದಲ್ಲಿ ಪ್ರಖ್ಯಾತ ವ್ಯಕ್ತಿಗೆ ಗೌರವ ಡಾಕ್ಟರೇಟ್ ಪ್ರಶಸ್ತಿ ನೀಡುವ ಬಗ್ಗೆ ಪರಿಶೀಲಿಸುವಂತೆ ಅಧ್ಯಕ್ಷರಿಗೆ ಸಲಹೆ ನೀಡಿದರು.<br>(ಕ್ರಮ: ಕುಲಸಚಿವರು) |
| | Dr. Y. B. Patil, Hon'ble member suggested the Chairman to look it into the matter of Award of Honorary Doctorate to person of eminence in the field of agriculture in the ensuing convocation of the University.<br>**(Action: Registrar)** |

ವಂದಾನಾರ್ಪಣೆಯೊಂದಿಗೆ ಸಭೆಯು ಮುಕ್ತಾಯವಾಯಿತು.

The meeting was concluded with the vote of thanks.

ಕುಲಸಚಿವರು ಹಾಗೂ ಸದಸ್ಯ ಕಾರ್ಯದರ್ಶಿಗಳು,
ವ್ಯವಸ್ಥಾಪನಾ ಮಂಡಳಿ, ತೋವಿವಿ, ಬಾಗಲಕೋಟ

**Registrar & Member Secretary**
**Board of Management, UHS, Bagalkote**